ಅಸಲು ದಾವಾ ನಂ.65/2008

ಪಿ.ಡಬ್ಲ್ಯೂ-1.

**ಸಾಕ್ಷಿಯನ್ನು ಇಂದು ದಿನಾಂಕಃ 20-11-2019 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಎಸ್.ಎ.ಪಿ. ವಕೀಲರಿಂದಃ**

ಪ್ರತಿವಾದಿಯ ತಾಯಿಯ ಹೆಸರು ರಶೀದಾಬೇಗಂ ಎಂದರೆ ಸರಿ. ರಶೀದಾಬೇಂಗ ಇವಳು 2 ದಾಖಲೆಗಳಲ್ಲಿ ಅಂದರೆ ಒಂದು ನೊಂದಾಯಿತ ಕ್ರಯ ಪತ್ರದ ಮೂಲಕ ಮತ್ತು ಒಂದು ಸಾದಾ ಪತ್ರದ ಮೂಲಕ ಆಕೆಯ ಆಸ್ತಿಗಳನ್ನು ಖರೀದಿ ಮಾಡಿದ್ದಳು ಎಂದರೆ ಒಂದು ಕ್ರಯ ಪತ್ರದ ಮೂಲಕ ಖರೀದಿ ಮಾಡಿರುವುದು ಮಾತ್ರ ಗೊತ್ತಿದೆ ಎಂದು ಸಾಕ್ಷಿ ನುಡಿಯುತ್ತಾರೆ. ರಶೀದಾಬೇಗಂ ಇವಳು ಜಾಗವನ್ನು ಖರೀದಿ ಮಾಡಿದಾಗ 4 ಕಡೆ ಗೋಡೆಗಳು ಇದ್ದವು ಎಂದರೆ ಸರಿ. ಸದರಿ ಗೋಡೆಗಳು 2 ರಿಂದ ಎರಡುವರೆ ಅಡಿ ಅಗಲ ಮಣ್ಣಿನ ಗೋಡೆ ಇದ್ದವು ಎಂದರೆ ಸರಿ. ನೊಂದಾಯಿತ ಕ್ರಯ ಪತ್ರದ ಮೂಲಕ ರಶೀದಾಬೇಗಂ ಜಾಗವನ್ನು ಖರೀದಿ ಮಾಡಿದ ನಂತರ ಇನ್ನೂ ಸ್ವಲ್ಪ ಜಾಗವನ್ನು ನೊಂದಾಯಿತವಲ್ಲದ ಪತ್ರದಿಂದ ಖರೀದಿ ಮಾಡಿದ್ದಳು ಎಂದರೆ ಗೊತ್ತಿಲ್ಲ. ರಶೀದಾಬೇಗಂ ಇವಳಿಗೆ ಸೈಯದ ಅಬ್ದುಲ ರಜಾಕ ತಂದೆ ಸೈಯದ ಅಲ್ಲಾವುದ್ದಿನ ಇವನು ಜಾಗವನ್ನು ಮಾರಾಟ ಮಾಡಿದ್ದನು ಎಂದರೆ ಸರಿ. ನೊಂದಾಯಿತವಲ್ಲದ ಕ್ರಯ ಪತ್ರದ ಮೂಲಕ ರಶೀದಾಬೇಗಂ ಇವಳು ಪೂರ್ವಕ್ಕೆ ಜಾಗವನ್ನು ಖರೀದಿ ಮಾಡಿದ್ದಾಳೆ ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ನನ್ನ ಮನೆ ರಸ್ತೆ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಜಾಗವು ಪೂರ್ವ – ಪಶ್ಚಿಮ 12 ಅಡಿ ಉತ್ತರ – ದಕ್ಷಿಣ 26 ಅಡಿ ಇದೆ ಎಂದರೆ ಸರಿಯಲ್ಲ ಅಲ್ಲಿ ರಸ್ತೆ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

ರಶೀದಾಬೇಗಂ ಮತ್ತು ಅಬ್ದುಲರಜಾಕ ಇವರು ಅನಕ್ಷರಸ್ಥರಾಗಿದ್ದರು ಎಂದರೆ ಗೊತ್ತಿಲ್ಲ. ಸ್ಥಳದಲ್ಲಿ 4 ಅಡಿ ಹೆಚ್ಚಿಗೆ ಇದ್ದರು ಸಹ ಅದು ಗೋಡೆ ಭಾಗವಾಗಿದೆ ಎಂದು ತಪ್ಪು ತಿಳುವಳಿಕೆಯಿಂದ ರಶೀದಾಬೇಗಂ ಇವಳ ಕ್ರಯ ಪತ್ರದಲ್ಲಿ 4 ಅಡಿ ಕಡಿಮೆ ಜಾಗವನ್ನು ನಮೂದಿಸಲಾಗಿತ್ತು ಎಂದರೆ ಸರಿಯಲ್ಲ. ರಶೀದಾಬೇಗಂ ಇವಳು ಖರೀದಿ ಮಾಡಿದ 2 ಜಾಗವನ್ನು ತನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಳು ಎಂದರೆ ಸರಿ. ರಶೀದಾಬೇಗಂ ಇವಳು ಜಾಗವನ್ನು ಖರೀದಿ ಮಾಡಿದಾಗ ನಾವು ಯಾವುದೇ ಆಕ್ಷೇಪಣೆ ಮಾಡಿಲ್ಲ. ರಶೀದಾಬೇಗಂ ಇವಳು ತಾನು ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ ಜಾಗ ಮತ್ತು ಸ್ಟಾಂಪ ಪೇಪರ ಮೂಲಕ ಖರೀದಿ ಮಾಡಿದ ಜಾಗ ಎರಡನ್ನು ಸೇರಿಸಿ 1974 ರಲ್ಲಿ ಭೀಮಣ್ಣಾ ಜನವರಿ ಇವನಿಗೆ ಮಾರಾಟ ಮಾಡಿದ್ದಾಳೆ ಎಂದರೆ ಸರಿಯಲ್ಲ. ಮುನ್ಸಿಪಾಲಿಟಿಯವರು ಯಾರಾದರು ಜಾಗವನ್ನು ಖರೀದಿ ಮಾಡಿದ್ದರೆ ಅಕ್ಕ-ಪಕ್ಕದವರಿಗೆ ನೋಟಿಸ್ಸು ನೀಡುತ್ತಾರೆ ಎಂದರೆ ಸರಿ ಆದರೆ ನಮಗೆ ನೀಡಿಲ್ಲ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. 2007 ರಲ್ಲಿ ಪ್ರತಿವಾದಿಗೆ ಭೀಮಣ್ಣಾ ಜನವರಿ ಇತನು ತಾನು ಖರೀದಿಗೆ ತೆಗೆದುಕೊಂಡಿದ್ದ ಜಾಗವನ್ನು ವಾಪಾಸು ಮಾರಾಟ ಮಾಡಿದ್ದಾನೆ ಎಂದರೆ ಗೊತ್ತಿಲ್ಲ. ಸದರಿ ಖರೀದಿಯಾದ ನಂತರ ಮುನ್ಸಿಪಾಲಿಟಿಯಲ್ಲಿ ನೋಟಿಸ್ಸನ್ನು ಹಾಕಿದರು, ಅದಕ್ಕೆ ಯಾರು ತಕರಾರು ಹಾಕಿಲ್ಲ ಹಾಗಾಗಿ ಪ್ರತಿವಾದಿ ಹೆಸರಿನಲ್ಲಿ ಮುಟೇಶನ ಆಗಿದೆ ಎಂದರೆ ಗೊತ್ತಿಲ್ಲ.

ನ್ಯಾಯಾಲಯದಿಂದ ನಿಯೋಗಿಯನ್ನು ಸ್ಥಳ ಪರಿಶೀಲನೆಗಾಗಿ ನೇಮಿಸಲಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ನಿಯೋಗಿ ಬಂದು ಸ್ಥಳ ಪರಿಶೀಲನೆ ಮಾಡಿಕೊಂಡು ಹೋಗಿ ವರದಿ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯು ಹಳೆಯ ಗೋಡೆಯನ್ನು ಹಾಗೆ ಇರಿಸಿಕೊಂಡು ನಡುವೆ ಪಿಲ್ಲರಗಳನ್ನು ಹಾಕಿ ಹೊಸ ಮನೆ ಕಟ್ಟಿದ್ದಾಳೆ ಎಂದರೆ ಸರಿಯಲ್ಲ. ಹಳೆ ಗೋಡೆಯನ್ನು ಕೆಡವಿ ಅದೇ ಸ್ಥಳದಲ್ಲಿ ಪಿಲ್ಲರಗಳನ್ನು ಹಾಕಿ ಹೊಸ ಮನೆ ಕಟ್ಟಿಸಿದ್ದಾಳೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-13 ರಲ್ಲಿ ನೀಲಿ ಬಣ್ಣದ ಗೋಡೆಯು ನಮ್ಮ ಮನೆ ಆಗಿರುತ್ತದೆ ಕಟ್ಟಿಗೆಗಳಿಂದ ಮಾಡಿರುವ ಗುಡಿಸಲು ಪ್ರತಿವಾದಿ ಕಟ್ಟಿರುತ್ತಾಳೆ ಎಂದು ಸಾಕ್ಷಿ ನುಡಿಯುತ್ತಾರೆ. ಈಗ ಒಂದು ಫೋಟೊವನ್ನು ಸಾಕ್ಷಿಗೆ ತೋರಿಸಿ ಅದರ ಎಡಭಾಗದಲ್ಲಿ ಇರುವ ಗೋಡೆಯು ಪ್ರತಿವಾದಿಯ ಗೋಡೆ ಅಗಿರುತ್ತದೆ ಎಂದರೆ ಸಾಕ್ಷಿ ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಒಪ್ಪಿಕೊಂಡಿರುವ ಫೋಟೊವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರತಿವಾದಿ ಗೋಡೆ ಎಂದು ಒಪ್ಪಿಕೊಂಡ ಭಾಗವನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ಈಗ ನಿಡಿ-1(ಬಿ) ಎಂದು ಗುರುತಿಸಲಾದಂತಹ ಭಾಗವು ನನ್ನ ಮನೆಯ ದಕ್ಷಿಣ ಬಾಗಿಲು ಎಂದರೆ ಸರಿಯಲ್ಲ ಅದು ನಮ್ಮ ಮನೆಯ ಒಳಗಿನ ಬಾಗಿಲು ಎಂದು ಸಾಕ್ಷಿ ನುಡಿಯುತ್ತಾರೆ. ನಿಡಿ-1 ರಲ್ಲಿ ಕಾಣಿಸುತ್ತಿರುವ ಕೇರು ಪ್ರತಿವಾದಿ ಮನೆಯ ಪೂರ್ವದಿಕ್ಕಿಗೆ ಬರುತ್ತದೆ ಎಂದರೆ ಸರಿ ಅದು ನಮ್ಮ ಮನೆಯ ದಕ್ಷಿಣ ದಿಕ್ಕಿಗೂ ಸಹ ಬರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಈಗ ಇನ್ನೊಂದು ಭಾವಚಿತ್ರವನ್ನು ತೋರಿಸಿದಾಗ ಸಾಕ್ಷಿಯು ಅದರಲ್ಲಿ ಕಾಣುತ್ತಿರುವ ಗೋಡೆ ಮತ್ತು ಪತ್ರಾಶೆಡ್ಡು ಪ್ರತಿವಾದಿಯದ್ದು ಆಗಿರುತ್ತದೆ ಎಂದು ಒಪ್ಪಿಕೊಳ್ಳುತ್ತಾರೆ. ಸಾಕ್ಷಿ ಒಪ್ಪಿಕೊಂಡ ಫೋಟೊವನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ಕಾಣುತ್ತಿರುವ ರಸ್ತೆ ಪ್ರತಿವಾದಿ ಮನೆಯ ದಕ್ಷಿಣಕ್ಕೆ ಇದೆ ಎಂದರೆ ಸರಿ. ಈಗ ಇನ್ನೊಂದು ಭಾವಚಿತ್ರವನ್ನು ಸಾಕ್ಷಿಗೆ ತೋರಿಸಿದಾಗ ಅದರಲ್ಲಿ ನಮ್ಮ ಮನೆ ಗೋಡೆ ಮತ್ತು ಪ್ರತಿವಾದಿ ಮನೆ ಗೋಡೆ ಮನೆ ಕಾಣಿಸುತ್ತದೆ ಎಂದು ಪ್ರತಿವಾದಿ ಒಪ್ಪಿಕೊಳ್ಳುತ್ತಾರೆ. ಸದರಿ ಫೋಟೊವನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-3 ರಲ್ಲಿ ಬಲಭಾಗದಲ್ಲಿ ಕಾಣಿಸುತ್ತಿರುವ ಸಣ್ಣ ಗೋಡೆಯು ನಮ್ಮ ಮನೆ ಗೋಡೆ ಆಗಿರುತ್ತದೆ. ಎಡಭಾಗದಲ್ಲಿ ಕಾಣಿಸುತ್ತಿರುವ ನೀಲಿ ಬಣ್ಣದ ಗೋಡೆಯು ಪ್ರತಿವಾದಿ ಗೋಡೆ ಆಗಿರುತ್ತದೆ. ಈಗ ಫೋಟೊಗಳಲ್ಲಿ ಕಾಣುತ್ತಿರುವ ಕೇರುಗಳನ್ನು ದಾವಾ ಆಸ್ತಿಯಲ್ಲಿ ಪ್ರತಿವಾದಿ ಕಟ್ಟಿದ್ದಾಳೆ ಎಂದರೆ ಸರಿ. ಸದರಿ ಫೋಟೊಗಳನ್ನು ನಿಡಿ-4 ಮತ್ತು 5 ಎಂದು ಗುರುತಿಸಲಾಯಿತು. ನಿಡಿ-4 ಮತ್ತು 5 ರಲ್ಲಿ ತೋರಿಸಿರುವ ಕೇರು ಇರುವ ಜಾಗ ಮತ್ತು ಕಟ್ಟಿರುವ ಮನೆ ಜಾಗ ರಶೀದಾಬೇಗಂ ಮತ್ತು ಭೀಮಣ್ಣಾ ಇವರ ಕಬ್ಜೆಯಲ್ಲಿ ಇತ್ತು. ಈಗ ಪ್ರತಿವಾದಿಯ ಕಬ್ಜೆಯಲ್ಲಿ ಇವೆ ಎಂದರೆ ಸರಿ. ನಿಡಿ-1 ರಲ್ಲಿ ಕಾಣುತ್ತಿರುವ ಕಲ್ಲುಗಳನ್ನು ನಾವು ಹಾಕಿದ್ದೇವೆ ಎಂದರೆ ಸರಿ. ನಿಡಿ-3 ರಲ್ಲಿ ಬಲಭಾಗದಲ್ಲಿ ಕಾಣುತ್ತಿರುವ ಕಲ್ಲುಗಳನ್ನು ನಾವು ಹಾಕಿದ್ದೇವೆ ಎಂದರೆ ಸರಿಯಲ್ಲ. ನಿಪಿ-12 ರಲ್ಲಿ ಬಲಭಾಗದಲ್ಲಿ ಕಾಣುತ್ತಿರುವ ಸಣ್ಣ ಗೋಡೆಯು ನಮ್ಮ ಮನೆ ಗೋಡೆಯಾಗಿರುತ್ತದೆ ಮತ್ತು ಎಡಭಾಗದಲ್ಲಿ ಕಾಣುತ್ತಿರುವ ದೊಡ್ಡ ಗೋಡೆ ಮತ್ತು ಕೇರು ಪ್ರತಿವಾದಿಯದ್ದು ಆಗಿರುತ್ತದೆ. ನಿಪಿ-13 ರಲ್ಲಿ ಕಾಣುತ್ತಿರುವ ಬಾಗಿಲು ನನ್ನ ಮನೆ ಬಾಗಿಲು ಎಂದರೆ ಸರಿ. ಮುಂಚೆ ಸದರಿ ಬಾಗಿಲು ನಿಪಿ-13 ರ ಬಲಭಾಗದಲ್ಲಿ ಇತ್ತು ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ಬಲಭಾಗದಲ್ಲಿ ಇದ್ದಂತಹ ಬಾಗಿಲನ್ನು ತೆಗೆದು ಹಾಕಿ ದಾವಾ ಹೂಡುವ ಮೊದಲು ಎಡಭಾಗಕ್ಕೆ ತೆರೆಯಲಾಗಿದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿರುವುದರಿಂದ ಮೂಂದೂಡಲಾಯಿತು).

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.